# ಸಂಕಷ್ಟಕರನ ಫ್ಯಾಮಿಲಿ ಪ್ಯಾಕ್!

**‘ಸಂಕಷ್ಟಕರ ಗಣಪತಿ’ ಸಿನಿಮಾದ ಮೂಲಕ ಗಮನಸೆಳೆದಿದ್ದ ಲಿಖಿತ್ ಶೆಟ್ಟಿ ಮತ್ತು ಅರ್ಜುನ್ ಕುಮಾರ್ ಜೋಡಿ ಈಗ ‘ಫ್ಯಾಮಿಲಿ ಪ್ಯಾಕ್’ ಎಂಬ ಪಕ್ಕಾ ಕಾಮಿಡಿ ಎಂಟರ್‌ಟೈನರ್ ಸಿನಿಮಾದ ಮೂಲಕ ಮತ್ತೆ ಪ್ರೇಕ್ಷಕರ ಎದುರು ಬರಲು ಸಜ್ಜಾಗಿದ್ದಾರೆ. ಈ ಬಾರಿ ಅವರಿಗೆ ಪಿಆರ್‌ಕೆ ಪ್ರೊಡಕ್ಷನ್ ಅಭಯಹಸ್ತವೂ ಸಿಕ್ಕಿದೆ.**

■ **ಪದ್ಮನಾಭ ಭಟ್**

ಗಡಸು ಧ್ವನಿ, ನಿರರ್ಗಳ ಮಾತುಗಾರಿಕೆಯಿಂದ ಉದಯ ಸಮೂಹದ ‘ಯು 2’ ಸಂಗೀತ ವಾಹಿನಿಯ ಕಾರ್ಯಕ್ರಮ ನಿರೂಪಕನಾಗಿ ಜನಪ್ರಿಯರಾಗಿದ್ದವರು ಲಿಖಿತ್ ಶೆಟ್ಟಿ. ‘ನನ್ನ ಬದುಕಿಗೆ ಬ್ರೇಕ್ ಕೊಟ್ಟಿದ್ದು ಯು2 ವಾಹಿನಿ’ ಎಂದು ಹೆಮ್ಮೆಯಿಂದಲೇ ಹೇಳಿಕೊಳ್ಳುವ ಅವರು, 2010ರಲ್ಲಿ ಬಿಡುಗಡೆಯಾದ ‘ಪರೋಲ್’ ಸಿನಿಮಾದಲ್ಲಿ ಒಂದು ಪಾತ್ರದಲ್ಲಿ ಕಾಣಿಸಿಕೊಂಡಿದ್ದರು. ಇದು ಚಿತ್ರಜಗತ್ತಿನಲ್ಲಿ ಅವರ ಮೊದಲ ಹೆಜ್ಜೆ. ಪ್ರಸ್ತುತ ‘ಫ್ಯಾಮಿಲಿ ಪ್ಯಾಕ್’ ಸಿನಿಮಾ ತಯಾರಿಯಲ್ಲಿ ಬ್ಯುಸಿ ಇರುವ ಲಿಖಿತ್ ನಟನಾಬದುಕಿಗೆ ಈಗ ದಶಕದ ಸಂಭ್ರಮ. ಹಾಗೆ ನೋಡಿದರೆ ಕನ್ನಡದಲ್ಲಿ ನಾಯಕನಟನಾಗಿ ಅವರ ನಟನಾಪಯಣ ಆರಂಭವಾಗಿದ್ದು 2018ರಲ್ಲಿ ಬಿಡುಗಡೆಯಾದ ‘ಸಂಕಷ್ಟಕರ ಗಣಪತಿ’ ಸಿನಿಮಾದ ಮೂಲಕ. ಅದಕ್ಕೂ ಮೊದಲೇ ಅವರು ತುಳು ಚಿತ್ರರಂಗದಲ್ಲಿ ನಾಯಕನಾಗಿ ಪರಿಚಿತರಾಗಿದ್ದರು. ಅಷ್ಟೇ ಅಲ್ಲ, ಅವರು ಅಲ್ಲಿ ನಾಯಕನಾಗಿ ನಟಿಸಿದ ‘ಒರಿಯಾರ್ದೊರಿ ಅಸಲ್’ ಸಿನಿಮಾ ಚಿತ್ರಮಂದಿರದಲ್ಲಿ ಒಂದು ವರ್ಷ ಪ್ರದರ್ಶನ ಕಂಡಿತ್ತು.

ಹತ್ತು ವರ್ಷಗಳ ಹಿಂದೆಯೇ ನಟನೆಗೆ ಬಂದು ಎರಡು ವರ್ಷಗಳ ಹಿಂದೆಯಷ್ಟೇ ನಾಯಕನಟನ ಪಟ್ಟ ಗಿಟ್ಟಿಸಿಕೊಂಡ ಅವರು ಈ ಅವಧಿಯಲ್ಲಿ ಸಾಕಷ್ಟು ಸೈಕಲ್ ಹೊಡೆದಿದ್ದಾರೆ. ಆದರೆ ಆ ಕುರಿತು ಅವರಲ್ಲಿ ಯಾವ ವಿಷಾದವೂ ಇಲ್ಲ. ‘ಯಾರೇ ಹೊಸಬರು ಬಂದರೂ ಒಮ್ಮಿಂದೊಮ್ಮೆಲೇ ಅವಕಾಶ ಸಿಗುವುದಿಲ್ಲ. ಅದಕ್ಕಾಗಿ ಸಾಕಷ್ಟು ಕಷ್ಟಪಡಬೇಕು. ಆ ಕಷ್ಟದ ದಿನಗಳ ಅನುಭವವೇ ನಮ್ಮನ್ನು ಯಶಸ್ಸನ್ನು ನಿಭಾಯಿಸಲು ಕಲಿಸುವುದು’ ಎನ್ನುವ ಅವರ ಮಾತಿನಲ್ಲಿ ಮಾಗಿದ ವ್ಯಕ್ತಿತ್ವದ ಸುಳಿವೂ ಸಿಗುತ್ತದೆ.

2013ರಲ್ಲಿ ಅವರು ನಟಿಸಿದ್ದ ‘ನಮ್ ದುನಿಯಾ ನಮ್ ಸ್ಟೈಲ್’ ಎಂಬ ಸಿನಿಮಾ ಬಹುತಾರಾಗಣ ಹೊಂದಿತ್ತು. ಆ ಸಿನಿಮಾದಲ್ಲಿ ನಟಿಸಿದ ಮರುವರ್ಷ ಅಂದರೆ 2014ರಲ್ಲಿ ಅವರು ‘ಮದಿಮೆ’ ಎಂಬ ಇನ್ನೊಂದು ತುಳು ಸಿನಿಮಾದಲ್ಲಿಯೂ ನಟಿಸಿದರು.



‘ಫ್ಯಾಮಿಲಿ ಪ್ಯಾಕ್’ ಚಿತ್ರದಲ್ಲಿ ಲಿಖಿತ್ ಶೆಟ್ಟಿ ಮತ್ತು ಅಮೃತಾ ಅಯ್ಯಂಗಾರ್

ಈ ನಡುವೆ ಲಿಖಿತ್ ಕನ್ನಡ ವಾಹಿನಿಯೊಂದರಲ್ಲಿ ‘ಒಗ್ಗರಣೆ ಡಬ್ಬಿ’ ಎಂಬ ಕಾರ್ಯಕ್ರಮವನ್ನು ನಡೆಸಿಕೊಡುತ್ತಿದ್ದರು. ಅಡುಗೆಗೆ ಸಂಬಂಧಿಸಿದ ಈ ಕಾರ್ಯಕ್ರಮ ಅವರ ಬದುಕಿನ ಕನಸಿನ ರಸಪಾಕಕ್ಕೂ ರೆಸಿಪಿ ದೊರಕಿಸಿದ್ದು ವಿಶೇಷ. ಇದೇ ಕಾರ್ಯಕ್ರಮಕ್ಕೆ ಸಹಾಯಕ ನಿರ್ದೇಶಕರಾಗಿದ್ದ ಅರ್ಜುನ್ ಕುಮಾರ್ ಮತ್ತು ಲಿಖಿತ್ ಅವರಿಗೆ ಬಹುಬೇಗ ಸ್ನೇಹ ಬೆಳೆಯಲು ಕಾರಣ ಅವರಿಬ್ಬರಲ್ಲಿಯೂ ಇದ್ದ ಸಿನಿಮಾದ ಕನಸು. ಸ್ನೇಹದ ಫಲವಾಗಿಯೇ ‘ಸಂಕಷ್ಟಕರ ಗಣಪತಿ’ ಎಂಬ ವಿಶಿಷ್ಟ ಸಿನಿಮಾ ಕಥೆ ರೂಪುಗೊಂಡಿದ್ದು. ಈ ಚಿತ್ರ ಲಿಖಿತ್ ಅವರಿಗೆ ನಾಯಕನಟನ ಹುದ್ದೆ ಕೊಟ್ಟಿದ್ದಷ್ಟೇ ಅಲ್ಲ, ಸಾಲು ಸಾಲು ಅವಕಾಶಗಳ ಹೆಬ್ಬಾಗಿಲನ್ನೂ ತೆರೆಯಿತು.

‘ಕಳೆದ ಹತ್ತು ವರ್ಷಗಳಿಂದ ಕನ್ನಡ ಚಿತ್ರರಂಗದಲ್ಲಿದ್ದರೂ ನನಗೆ ಅಷ್ಟೊಂದು ಅವಕಾಶಗಳೇನೂ ಬರುತ್ತಿರಲಿಲ್ಲ. ಆದರೆ ‘ಸಂಕಷ್ಟಕರ ಗಣಪತಿ’ ಸಿನಿಮಾದ ನಂತರ ಸಾಲು ಸಾಲು ಅವಕಾಶಗಳು ಬರಲು ಶುರುವಾದವು. ಇದುವರೆಗೆ ಸುಮಾರು ಐವತ್ತಕ್ಕೂ ಹೆಚ್ಚು ಕತೆಗಳನ್ನು ಕೇಳಿದ್ದೇನೆ’ ಎನ್ನುತ್ತಾರೆ ಲಿಖಿತ್. ಹಾಗೆಂದು ಬಂದ ಸಿನಿಮಾಗಳನ್ನೆಲ್ಲ ಒಪ್ಪಿಕೊಂಡು ವಿಕಿಪಿಡಿಯಾದಲ್ಲಿ ತಮ್ಮ ಫಿಲ್ಮೋಗ್ರಫಿ ಲಿಸ್ಟ್ ಹಿಗ್ಗಿಸುವ ಹಂಬಲವೇನೂ ಅವರಿಗಿಲ್ಲ.

‘ನಾನು ಇಷ್ಟು ವರ್ಷ ಸಿನಿಮಾದ ಜೊತೆಗೇ ಒಡನಾಡುತ್ತಿದ್ದರಿಂದ ಯಾವ ಸಿನಿಮಾ ಜನರಿಗೆ ಇಷ್ಟವಾಗಬಹುದು; ಯಾವುದು ಇಷ್ಟವಾಗುವುದಿಲ್ಲ ಎಂಬ ತಿಳಿವಳಿಕೆ ಬಂದಿದೆ. ಹಾಗಾಗಿ ಎಲ್ಲ ಸಿನಿಮಾಗಳನ್ನೂ ಒಪ್ಪಿಕೊಳ್ಳಲಿಲ್ಲ’ ಎನ್ನುವ ಅವರು ಈಗ ತಮ್ಮ ಹಳೆಯ ಸ್ನೇಹಿತ, ‘ಸಂಕಷ್ಟಕರ ಗಣಪತಿ’ ನಿರ್ದೇಶಕ